# ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ದಾಂಡೇಲಿ

## ಸಿ. ಸಿ.- 639/2025

**ಫಿರ್ಯಾದುದಾರರು** : ಶ್ರೀ. ಗುರುದೀಪ್ ಸಿಂಗ್ ಪ್ಯಾರಸಿಂಗ್ ಕೌನ್ಸಲ್,
ವಯಸ್ಸುಃ 45 ವರ್ಷ,
ಉದ್ಯೋಗಃ ಡಬ್ಲ್ಯೂಸಿಪಿಎಮ್ ಉದ್ಯೋಗಿ,
ವಾಸಃ ಗಣಪತಿ ಮಂದಿರದ ಹತ್ತಿರ, ಟೌನ್‌ಶಿಪ್,
ದಾಂಡೇಲಿ, ತಾಃ ದಾಂಡೇಲಿ, ಜಿಃ ಉತ್ತರ ಕನ್ನಡ.

**---ವಿರುದ್ಧ--**

**ಆರೋಪಿ** : ಶ್ರೀ. ದೇವರಾಜ್ ಶ್ರೀನಿವಾಸ ದೇಸಾಯಿ,
ವಯಸ್ಸುಃ 36,
ಉದ್ಯೋಗಃ ಡಬ್ಲ್ಯೂಸಿಪಿಎಮ್ ಉದ್ಯೋಗಿ,
ವಾಸಃ ಮನೆ ನಂ.269, EWS ಕ್ವಾರ್ಟರ್ಸ್,
ಅಂಬೇವಾಡಿ, ದಾಂಡೇಲಿ, ತಾಃ ದಾಂಡೇಲಿ,
ಜಿಃ ಉತ್ತರ ಕನ್ನಡ.

ಆರೋಪಿಯಾದ ನಿಮ್ಮ ವಿರುದ್ಧ ಈ ಕೆಳಗಿನಂತೆ ನಾನು ಹೊರಿಸಿರುವಃ

## ಆ ಪಾ ದ ನೆ

ಏನೆಂದರೆ ಆರೋಪಿಯಾದ ನೀವು ಮತ್ತು ಫಿರ್ಯಾದಿಯು ಹಲವು ವರ್ಷಗಳಿಂದ ಪರಿಚಯಸ್ಥರಾಗಿದ್ದು, ಆರೋಪಿಯಾದ ನೀವು ನಿಮ್ಮ ಕುಟುಂಬದ ಮತ್ತು ಆರ್ಥಿಕ ಅಡಚಣೆ ಸಲುವಾಗಿ ಫಿರ್ಯಾದಿಯಿಂದ ರೂ.2,50,000/- ರೂಪಾಯಿಗಳನ್ನು ಕೈಸಾಲವಾಗಿ ಪಡೆದುಕೊಂಡಿದ್ದು, ನಂತರ ಫಿರ್ಯಾದಿಯು ಕೆಳವು ದಿನಗಳು ಬಿಟ್ಟು ನಿಮಗೆ ಸದರಿ ಹಣವನ್ನು ಮರಳಿ ಕೊಡಲು ಕೇಳಿದಾಗ, ನೀವು ದಿನಾಂಕ 23.07.2025 ರಂದು ಕೆನರಾ

ಬ್ಯಾಂಕ, ಜೆ.ಎನ್. ರಸ್ತೆ, ದಾಂಡೇಲಿ ಶಾಖೆಯ ನಿಮ್ಮ ಖಾತೆ ನಂ. 181250010146140 ನೇದ್ದಕ್ಕೆ ಸಂಬಂಧಿಸಿದ ಚೆಕ್ ನಂ. 071716 ಚೆಕ್ಕನ್ನು ರೂ.2,50,000/- ಹಣದ ಪಾವತಿಗಾಗಿ ಫಿರ್ಯಾದಿಗೆ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದಿದಾರರು ಕೆನರಾ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ದಾಂಡೇಲಿ ಶಾಖೆಯಲ್ಲಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ಸದರಿ ಚೆಕ್ಕನ್ನು ಪರಿಶೀಲಿಸಿ ದಿನಾಂಕ 05.108.2025 ರಂದು "Funds Insufficient" ಎಂಬ ಹಿಂಬರಹದೊಂದಿಗೆ ಉತ್ತರಿಸಿರುತ್ತಾರೆ. ನಂತರ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ದಿನಾಂಕಃ 12-08-2025 ರಂದು ನೋಂದಾಯಿತ ಅಂಚೆ ಮೂಲಕ ನೋಟೀಸನ್ನು ಜಾರಿ ಮಾಡಿದ್ದರೂ ಸಹ ನೀವು ಚೆಕ್ಕಿನ ಹಣ ಪಾವತಿ ಮಾಡದೇ ಉದ್ದೇಶಪೂರ್ವಕವಾಗಿ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂಬ ವಿಚಾರವನ್ನು ತಿಳಿದಿದ್ದು ಚೆಕ್ಕನ್ನು ನೆಗೋಶಿಯಬಲ್ ಎನ್ಸಟ್ರುಮೆಂಟ್ ಕಾಯ್ದೆ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

## ಆರೋಪಿಯ ಹೇಳಿಕೆ

1. **ಪ್ರಶ್ನೆಃ** ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ?

**ಉತ್ತರಃ**

2. **ಪ್ರಶ್ನೆಃ** ಈ ಆಪಾದನೆ ಬಗ್ಗೆ ನೀವು ನಿಮ್ಮ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

**ಉತ್ತರಃ**

(ಈ ಆಪಾದನೆಯನ್ನು ದಿನಾಂಕಃ 27.01.2026 ರಂದು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿ, ಅವರಿಂದ ಉತ್ತರ ಪಡೆದು ದಾಖಲಿಸಿದ್ದೇನೆ.)

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದಾಂಡೇಲಿ**